**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿಸಿ.ನಂ.7155/2022**

**ಸಿ.ಡಬ್ಲ್ಯೂ-1**

**ಪಿ.ಡಬ್ಲ್ಯೂ-1**

| | | |
|---|---|---|
| ಸಾಕ್ಷಿಯ ಹೆಸರು | : | ಯಲ್ಲವ್ವ ನಡೂರ |
| ತಂದೆ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 76 ವರ್ಷ |
| ಉದ್ಯೋಗ | : | ಏನು ಇಲ್ಲ |
| ವಾಸಸ್ಥಳ | : | ನಂದರಗಿ |

**ದಿನಾಂಕ:04-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 4 ನನ್ನ ಮೊಮ್ಮಗಳು. ಚಾಸಾ 5 ನನ್ನ ಮೊಮ್ಮಗಳ ಗಂಡ. ಚಾಸಾ 6 ಮತ್ತು 7 ರವರ ಪರಿಚಯ ಇರುತ್ತದೆ. ಆರೋಪಿತರು ಸಂಬಂಧಿಕರು. ಈಗ್ಗೆ 2-3 ವರ್ಷಗಳ ಹಿಂದೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ಚಾಸಾ 4 ರವರು ಕೆಲಸಕ್ಕೆ ಹೋದಾಗ ನಾನು ಮನೆಯಲ್ಲಿ ಊಟ ಮಾಡುತ್ತಿದ್ದಾಗ 1 ನೇ ಆರೋಪಿಯು ಬಟ್ಟೆ ತೊಳೆಯುವ ನೀರನ್ನು ನನ್ನ ಮುಖಕ್ಕೆ ಚೆಲ್ಲಿರುತ್ತಾರೆ. 2 ಮತ್ತು 3 ನೇ ಆರೋಪಿತರು ನನ್ನ ಕೈ ಹಿಡಿದು 1 ನೇ ಆರೋಪಿತಳು ನನಗೆ ಹೊಡೆದಿರುತ್ತಾಳೆ. ನಂತರ ಚಾಸಾ 4 ರವರು ಬಂದು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 1 ನೇ ಆರೋಪಿಯು ನನಗೆ ಹೊಡೆದು ಕಾಲು ಮತ್ತು ಕೈಯನ್ನು ಮುರಿದಿರುತ್ತಾರೆ. 2 ಮತ್ತು 3 ನೇ ಆರೋಪಿತರು ನನ್ನ ಕೈ ಹಿಡಿದು ನೂಕಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿದ್ದು ನಾನು ಹೇಳಿದಂತೆ ಪೊಲೀಸರು ಪಿರ್ಯಾದಿ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿಃ12.12.2021 ರಂದು ಮುಂಜಾನೆ 9.30 ಗಂಟೆ ಸುಮಾರಿಗೆ ಕೈಯಿಂದ, ಚಪ್ಪಲಿನಿಂದ ಮತ್ತು ಕಬ್ಬಿಣದ ಬುಟ್ಟಿಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಅವಾಚ್ಯ ಶಬ್ದಗಳಿಂದ ಬೈದು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಈ ರೀತಿ ನಾನು ಬಿ.ಎಲ್.ಡಿ. ಆಸ್ಪತ್ರೆಯಲ್ಲಿದ್ದಾಗ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಚಪ್ಪಲಿ ಮತ್ತು ಕಬ್ಬಿಣದ ಬುಟ್ಟಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಬಿ.ಬಿ. ವಕೀಲರಿಂದಃ</u>**

ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋಗಿರುತ್ತೇನೆಂದು ಗೊತ್ತಿಲ್ಲ. ನಾವು ಆಸ್ಪತ್ರೆಗೆ ಖಾಸಗಿ ವಾಹನದಲ್ಲಿ ಹೋಗಿರುತ್ತೇವೆ ಆ ಮಾಲೀಕನ ಹೆಸರು ಗುಬ್ಬೇವಾಡ ಇವರದು ಇರುತ್ತದೆ. ಆಸ್ಪತ್ರೆಯಿಂದ 2 ತಿಂಗಳುಗಳ ನಂತರ ನಾನು ಡಿಸ್ಚಾರ್ಜ ಆಗಿರುತ್ತೇನೆ. ನಮ್ಮ ಮನೆ ಊರಿನಲ್ಲಿರುತ್ತದೆ ಎಂದರೆ ಸರಿ. ನಮ್ಮ ಮನೆಯ ಅಕ್ಕಪಕ್ಕ ಮನೆಗಳು ಇಲ್ಲ. ನಾನು ದೂರನ್ನು ಆಸ್ಪತ್ರೆಯಲ್ಲಿ ಭಾನುವಾರ ನೀಡಿರುತ್ತೇನೆ. ಜಗಳ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.2 ಹೊಸ ಬುಟ್ಟಿ ಇರುತ್ತದೆ ಎಂದರೆ ಸರಿಯಲ್ಲ. ಮು.ಮಾ.2 ನಮ್ಮದು ಇರುತ್ತದೆ. ಮು.ಮ.1 ಮತ್ತು 2 ರಿಂದ ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತರಿಗೂ ಯಾವುದೇ ಜಗಳ ಆಗದೇ ಇದ್ದರು ಸಹ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿಯವರು ನನ್ನ ಖಾಸ ಸಂಬಂಧಿಕರು ಎಂದರೆ ಸರಿ. ಆರೋಪಿತರು ಈ ದೂರು ದಾಖಲಾಗುವ ಮುಂಚೆ ಒಂದು ಹೊಲವನ್ನು ತೆಗೆದುಕೊಂಡಿದ್ದು ಸದರಿ ಹೊಲದ ಉತ್ಪನ್ನವನ್ನು ನನಗೂ ಕೊಡಿ ಎಂದು ಅವರಿಗೆ ನಾನು ಆಗಾಗ ಜಗಳ ತೆಗೆಯುತ್ತಿದ್ದೇನು ಎಂದರೆ ಸರಿಯಲ್ಲ. ಆರೋಪಿತರು ಹೊಲದ ಉತ್ಪನ್ನವನ್ನು ನನಗೆ ಕೊಡದೇ ಇದ್ದ ಕಾರಣ ಅವರ ಮೇಲೆ ನಾನು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)</u>

**ಓ.ಹೆ.ಕೆ. ಸರಿ ಇದೆ**

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**